# ‘ಅರಿವಿನ ಅಂಗಳ’ ಕಮ್ಮಟಕ್ಕೆ ಉತ್ತಮ ಪ್ರತಿಕ್ರಿಯೆ

## ಬನವಾಸಿ ಬಳಗದಿಂದ ಕನ್ನಡ ಭಾಷೆಯಲ್ಲಿ ರಾಮನ್ ಇನ್ಸ್ಟಿಟ್ಯೂಟ್‌ನಲ್ಲಿ ವಿಜ್ಞಾನ ಕಮ್ಮಟ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಕನ್ನಡ ಭಾಷೆಯಲ್ಲೇ ವಿಜ್ಞಾನ ವಿಷಯವನ್ನು ಬೋಧಿಸುವ ‘ಅರಿವಿನ ಅಂಗಳ’ ಹೆಸರಿನ ವಿಜ್ಞಾನ ಕಮ್ಮಟಕ್ಕೆ ಅತ್ಯುತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಬನವಾಸಿ ಬಳಗ ಸಂಸ್ಥೆಯು ವಿಜ್ಞಾನ-ತಂತ್ರಜ್ಞಾನದ ಕಲಿಕೆಯನ್ನೂ ಮಾತೃಭಾಷೆ ಕನ್ನಡದಲ್ಲೇ ಕಲಿಸಬೇಕು ಎಂಬ ಉದ್ದೇಶದಿಂದ ಇಂಡಿಯನ್ ಅಕಾಡೆಮಿ ಆಫ್ ಸೈನ್ಸ್ ಟ್ರಸ್ಟ್ ಹಾಗೂ ಸೈನ್ಸ್ ಉತ್ಸವ ಸಂಸ್ಥೆಯ ಸಹಯೋಗದಲ್ಲಿ ನಗರದ ಖಾಸಗಿ ಕನ್ನಡ ಮಾಧ್ಯಮ ಶಾಲೆಗಳ ವಿದ್ಯಾರ್ಥಿಗಳಿಗೆ ಕನ್ನಡದಲ್ಲೇ ವಿಜ್ಞಾನ ಕಮ್ಮಟ ಹಮ್ಮಿಕೊಂಡಿತ್ತು.

ರಾಮನ್ ಇನ್ಸ್ಟಿಟ್ಯೂಟ್ ಆವರಣದಲ್ಲಿ ಏರ್ಪಡಿಸಿದ್ದ ಕಮ್ಮಟಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಏಳು ಖಾಸಗಿ ಕನ್ನಡ ಮಾಧ್ಯಮ ಶಾಲೆಯ ಮಕ್ಕಳಿಗೆ ಕಂಪ್ಯೂಟರ್ ಸಾಫ್ಟ್‌ವೇರ್ ಕನ್ನಡದಲ್ಲಿ ಕಲಿಯುವ ಬಗೆ, ಬೆಳಕು ಹಾಗೂ ಬಣ್ಣದ ಆಟ ಹೇಗಿರುತ್ತದೆ, ಕೆಮಿಕಲ್ ಊಸರವಳ್ಳಿ ಎಂದರೇನು? ಹೀಗೆ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಹಾಗೂ ತಂತ್ರಜ್ಞಾನದ ಕುತೂಹಲಕಾರಿ ಅಂಶಗಳನ್ನು ಪ್ರಯೋಗದ ಸಹಿತ ತಿಳಿಸಿಕೊಡಲಾಯಿತು. ಬಳಿಕ ಕಲಿಕೆಯ ವಿಷಯಗಳ ಆಧಾರದ ಮೇಲೆ ನಡೆದ ರಸಪ್ರಶ್ನೆ ಸ್ಪರ್ಧೆಯಲ್ಲಿ ಜಯನಗರದ ವಿಜಯಾ ಹಾಗೂ




ಎಂಇಎಸ್ ಕನ್ನಡ ಮಾಧ್ಯಮ ಶಾಲೆಗಳು ಮೊದಲೆರಡು ಬಹುಮಾನ ಪಡೆದವು.

ಕಮ್ಮಟದ ಬಳಿಕ ಮಕ್ಕಳು ರಾಮನ್ ಮ್ಯೂಸಿಯಂಗೂ ಭೇಟಿ ನೀಡಿ ಸರ್.ಸಿ.ವಿ. ರಾಮನ್ ಅವರು ಭೌತಶಾಸ್ತ್ರದ ಪ್ರಪಂಚಕ್ಕೆ ಭಾರತದಿಂದ ಕೊಟ್ಟ ಕೊಡುಗೆಗಳ ಬಗ್ಗೆ ಪ್ರಯೋಗ ಸಮೇತ ತಿಳಿದುಕೊಂಡರು. ಬನವಾಸಿ ಬಳಗದ ಪ್ರಶಾಂತ್ ಹಾಗೂ ವಲ್ಲೀಶ್ ಕಾರ್ಯಕ್ರಮ ನಡೆಸಿಕೊಟ್ಟರು.

Kannada Prabha, Monday 04.02.2019, p3

Copyright @ kannada prabah e paper- Asianetnews.com 2019